ಆರಂಭಿಸಿದರು. ಆಧುನಿಕ ದಕ್ಷಿಣ ಭಾರತದಲ್ಲಿ ಅನೇಕ ಸಮುದಾಯಗಳು ಆಯಾ ರಾಜ್ಯಗಳ ಮೂಲನಿವಾಸಿಗಳು ತಾವು ಎಂಬುದನ್ನು ಸೂಚಿಸಲು 'ಆದಿ ಕರ್ನಾಟಕ', 'ಆದಿ ಆಂಧ್ರ', 'ಆದಿ ದ್ರಾವಿಡ' ಎಂದು ಗುರುತಿಸಿಕೊಂಡಿರುವುದನ್ನು ಕಾಣುತ್ತೇವೆ. ಇದು ಕೇವಲ ಸಾಮಾಜಿಕ ಗುರುತು ಮಾತ್ರವಲ್ಲ, ಜಾತಿ ಪ್ರಮಾಣ ಪತ್ರಗಳಲ್ಲೂ ಹಾಗೆಯೇ ಇದೆ. ಬೇರೆ ರಾಜ್ಯಗಳಲ್ಲಿನ ಅಸ್ಪೃಶ್ಯ ಸಮುದಾಯಗಳ ಗೌರವ, ಘನತೆ, ಸಮಾನತೆಗಾಗಿಯ ಹೋರಾಟದ ಇತಿಹಾಸ ರೋಚಕವಾದುದು ಎಂಬುದನ್ನು ಮಹಾರಾಷ್ಟ್ರದ ದಲಿತ ಸಮುದಾಯ ತಿಳಿದುಕೊಂಡಲ್ಲಿ ಅವರ ಅರಿವಿನ ವಿಸ್ತಾರದ ಜೊತೆಗೆ ಸಂಯಮ ಹಾಗೂ ವಿನಮ್ರತೆ ಮೈಗೂಡಿಸಿಕೊಳ್ಳಬಹುದು.

ಕ್ಯಾಲ್ಗರಿಯ ದಲಿತ ಸಮಾವೇಶದಲ್ಲಿ ನೆರೆದಿದ್ದವರಲ್ಲಿ ಬೆರಳೆಣಿಕೆಯಷ್ಟು ಮಂದಿ ಬೇರೆ ಸಮುದಾಯವರು ಅನ್ನುವುದನ್ನು ಬಿಟ್ಟರೆ ಉಳಿದವರೆಲ್ಲರೂ ಶಿಕ್ಷಿತ ದಲಿತರೇ. ಹಾಗಾಗಿ, 'ಶಿಕ್ಷಿತರಾಗಿ, ಸಂಘಟಿತರಾಗಿ, ಹೋರಾಡಿ' ಎಂಬ ಅಂಬೇಡ್ಕರ್ ಘೋಷವಾಕ್ಯವನ್ನು ಮತ್ತೆ ಮತ್ತೆ ಹೇಳುವವರೇ. ಆದರೆ, ಅವರಲ್ಲಿ ಬಹುತೇಕರು ಅಂಬೇಡ್ಕರ್ ಅವರ ಬರಹಗಳನ್ನಾಗಲಿ, ರಾಜಕೀಯ ತತ್ವ, ಸಿದ್ಧಾಂತ, ಮೀಮಾಂಸೆಗಳನ್ನಾಗಲಿ, ದಲಿತ ಸಾಹಿತ್ಯವನ್ನಾಗಲಿ ಓದಿಕೊಂಡವರೆಂದೆನಿಸಲಿಲ್ಲ. ಅಧ್ಯಯನಶೀಲತೆ ಹಾಗೂ ವೈಚಾರಿಕತೆ ಅಂಬೇಡ್ಕರ್ ಬದುಕಿನ ಅವಿಭಾಜ್ಯ ಅಂಗ, ಅದುವೇ ಅವರ ಪ್ರತಿ ನಿರ್ಣಯಕ್ಕೂ ತಾತ್ವಿಕತೆಯನ್ನು ಒದಗಿಸಿದ್ದರಿಂದಾಗಿ ಈ ಮಾತನ್ನು ಒತ್ತಿ ಹೇಳುತ್ತಿದ್ದೇನೆ. ವಿದೇಶಗಳಲ್ಲಿ ನೆಲೆಸಿರುವ ಬಹುಸಂಖ್ಯಾತ ಭಾರತೀಯರಂತೆ ಅಲ್ಲಿ ನೆಲೆಸಿದ್ದವರು ಎಂಜಿನಿಯರಿಂಗ್, ಸೈನ್ಸ್, ಮೆಡಿಕಲ್ ಕ್ಷೇತ್ರಗಳವರು. ಆ ಕಾರಣಕ್ಕೆ ಪ್ರಥಮ ರಾಷ್ಟ್ರಗಳಲ್ಲಿ ಉನ್ನತ ಶಿಕ್ಷಣಕ್ಕೆಂದು ಹೋದವರು ಅಲ್ಲೇ ಉದ್ಯೋಗ ಪಡೆದು ನೆಲೆಸಿರುವವರು. ಅಸ್ಪೃಶ್ಯ ಕುಟುಂಬಗಳಲ್ಲೋ, ಬೌದ್ಧ ಕುಟುಂಬಗಳಲ್ಲೋ ಹುಟ್ಟಿದ್ದಕ್ಕೆ ತಮ್ಮನ್ನು ತಾವು ದಲಿತರೆಂದೋ, ಬೌದ್ಧರೆಂದೋ, ಅಂಬೇಡ್ಕರ್‌ವಾದಿಯೆಂದೋ, ರವಿದಾಸೀಯರೆಂದೋ ಕರೆದುಕೊಳ್ಳುವವರು. ಇಂತಹ ಗ್ರಹಿಕೆಗಳ ಹಿಂದಿರುವುದು ಭಾವುಕತೆಯೇ ಹೊರತು, ತಾತ್ವಿಕ ತಿಳಿವಳಿಕೆಯಲ್ಲ. ತತ್ವ, ಸಿದ್ಧಾಂತಗಳ ಆಧಾರದ ಮೇಲೆ ದಲಿತರೆಂದು ಗುರುತಿಸಿಕೊಳ್ಳುವವರ ಸಂಖ್ಯೆ ಕಡಿಮೆಯೇ. ಆದರೆ, ಬಹುಸಂಖ್ಯಾತರು ಹೀಗೆಯೇ ಇರುವುದರಿಂದಾಗಿ ಇಂತಹ ಗ್ರಹಿಕೆಯನ್ನು ರೂಪಿಸುವುದೇನು?

ಕ್ಯಾಲ್ಗರಿಯ ಸಮಾವೇಶದ ಹತ್ತು ದಿನಗಳ ನಂತರ ಎಡ್ಮಂಟನ್ ನಗರದಲ್ಲಿ ಅಂಬೇಡ್ಕರ್ ಜಯಂತಿಯನ್ನು ಆಚರಿಸಲಾಯಿತು. ಖಾಸಗಿ ಸಭಾಂಗಣವೊಂದರಲ್ಲಿ ಆಯೋಜಿಸಲಾಗಿದ್ದ ಆ ಕಾರ್ಯಕ್ರಮದಲ್ಲಿ ನಗರದ ಮೇಯರ್ ಹಾಗೂ ಅಧಿಕಾರಿಗಳು ಕೂಡ ಭಾಗವಹಿಸಿದ್ದು, ಅಂಬೇಡ್ಕರ್ ತತ್ವ, ಸಿದ್ಧಾಂತಗಳ ಬಗ್ಗೆ ಮಾತನಾಡಿದ್ದು ವಿಶೇಷವಾಗಿತ್ತು. ಅವರನ್ನು ಆಹ್ವಾನಿಸಿದ್ದ ಉದ್ದೇಶ ಉತ್ತರ ಅಮೆರಿಕದ, ಅಂದರೆ ಅಮೆರಿಕ ಸಂಯುಕ್ತ ಸಂಸ್ಥಾನ ಹಾಗೂ ಕೆನಡಾದ ಕೆಲ ನಗರಗಳಲ್ಲಿ ಅಂಬೇಡ್ಕರ್ ಜಯಂತಿಯನ್ನು ಸಮಾನತಾ ದಿನವನ್ನಾಗಿ ಆಚರಿಸಲಾಗುತ್ತಿರುವುದರಿಂದ, ಜಾತಿ ತಾರತಮ್ಯವನ್ನು ನಿಷೇಧಿಸಬೇಕೆಂಬ ಹೋರಾಟ ನಡೆಯುತ್ತಿರುವುದರಿಂದ, ಎಡ್ಮಂಟನ್‌ನಲ್ಲೂ ಹಾಗೆ ಮಾಡಬೇಕೆಂಬುದುಕ್ಕೆ ಅನಧಿಕೃತವಾಗಿ ಕೋರಿಕೆ ಸಲ್ಲಿಸುವುದಾಗಿತ್ತು. ಅದು ಅಜೆಂಡಾ ಆದರೂ, ದಲಿತ ಸಮಾವೇಶಗಳು ಕೇವಲ ದಲಿತರಿಗೆ ಮಾತ್ರ ಸೀಮಿತವಾದಷ್ಟೂ ಅದು ಉಳಿದ ಸಮುದಾಯಗಳಿಂದ ಪ್ರತ್ಯೇಕಗೊಳ್ಳುತ್ತ ಹೋಗುತ್ತದೆ ಎಂಬುದು ನನ್ನ ವಾದ. ಹಾಗಾಗಿ, ದಲಿತ ಸಮಾವೇಶಗಳಲ್ಲಿ ಜಾತಿ ನಿರ್ಮೂಲನಾ ತತ್ವದಲ್ಲಿ ನಂಬಿಕೆಯಿರಿಸುವವರು ಜಾತಿ, ಮತ, ಧರ್ಮಗಳನ್ನು ಮೀರಿ ತತ್ವ, ಸಿದ್ಧಾಂತಗಳಿಗೆ ಬೆಲೆಕೊಟ್ಟು ಪಾಲ್ಗೊಳ್ಳಲು ಅನುವು ಮಾಡಬೇಕು. ಆಗಷ್ಟೇ ಅಂಬೇಡ್ಕರ್ ವಾದದಿಂದ ಪ್ರೇರಿತವಾದ 'ಸಮಾನತಾ ದಿನ'ದ ಆಶಯ ಈಡೇರಲು ಸಾಧ್ಯ.

ಎಡ್ಮಂಟನ್ ಕಾರ್ಯಕ್ರಮವೇನೋ ಯಶಸ್ವಿಯಾಗಿ ನಡೆಯಿತು. ಅಂದು ಸಂಜೆ ಯುವರಾಜ್ ಅವರ ಬೃಹತ್ ಮನೆಯಲ್ಲಿ ನನ್ನನ್ನೂ ಒಳಗೊಂಡಂತೆ ಸುಮಾರು 20 ಮಂದಿ ನೆರೆದಿದ್ದರು. ನನ್ನನ್ನು ಹೊರತುಪಡಿಸಿ ಉಳಿದವರೆಲ್ಲರೂ ಮರಾಠಿಗರಾಗಿದ್ದರು. ಹಾಗಾಗಿ, ಸಂಭಾಷಣೆ ಬಹುತೇಕ ಹಿಂದಿ ಹಾಗೂ ಇಂಗ್ಲಿಷ್‌ನಲ್ಲಿ ನಡೆಯಿತು. ಯುವರಾಜ್ ಅವರ ಶ್ರೀಮತಿಯವರು ಅಲ್ಲಿ ನೆರೆದಿದ್ದವರಿಗೆ ಅಂಬೇಡ್ಕರ್ ತಮ್ಮ ತಮ್ಮ ಜೀವನದ ಮೇಲೆ ಮಾಡಿರುವ ಪ್ರಭಾವ, ಪ್ರೇರಣೆ,